ತನ್ನ ಜೀವರಸ ನಿರ್ಧರಿಸುವ ಎತ್ತರಕ್ಕಲ್ಲ. ಈ ಮಾತೆಂದೂ ಅರಿವಾಗಲೇ ಇಲ್ಲವಲ್ಲ ಅಪ್ಪನಿಗೆ.'

ಶಾಲೆಗೆ ಹೋಗುವಾಗ ಎಲ್ಲ ಹುಡುಗರು ಎಂಟನೆಯ ಇಯತ್ತೆಗೆ ಫುಲ್ ಪ್ಯಾಂಟು ಹಾಕಿಕೊಂಡರೆ ಇವ ಮಾತ್ರ ಹಾಫ್ ಪ್ಯಾಂಟೇ. ಅದೂ ಕಳೆದ ವರ್ಷದ್ದು; ಉದ್ದುದ್ದ ಹೀಚುತ್ತಿದ್ದ ಮೊಣಕಾಲ ಗಂಟುಗಳ ಆರಿಂಚಿನ ಮೇಲೆ ಕೂತ ಪ್ಯಾಂಟು ಹಾಕಿಕೊಂಡು ಶಾಲೆಗೆ ಹೋಗಲೇ ನಾಚಿಗೆ ಬರುತ್ತಿತ್ತು. ಮೇಲೆ ಬರೆಯಿಟ್ಟಂತೆ ನಾಯಕ್ ಸರ್, "ತುಟಿ ಮ್ಯಾಲೆ ಗೆರಿ ಮೂಡಲಿಕತ್ತದ ಮಗನs ಇನ್ನೂ ತೊಡಿ ಕಾಣೋ ಚಡ್ಡಿ ಹಾಕ್ಕೋತಿ?" ಅಂತ ಎಲ್ಲರೆದುರು ಬಯ್ದೂ ಬಿಡುತ್ತಿದ್ದರು. ಅಪ್ಪನನ್ನು ಕೇಳಿದರೆ, "ಇನ್ನೂ ಮ್ಯಾಟ್ರಿಕ್ ಆಗಿಲ್ಲಾ, ಆಗಲೇ ಆಫೀಸರ ಗತೆ ಫುಲ್ ಪ್ಯಾಂಟ್ ಬೇಕಾ ಮಗನೆ? ಎದೀ ಸೀಳಿದರೆ ನಾಲ್ಕಕ್ಷರ ಇಲ್ಲಾ, ಷೋಕಿ ಮಾತ್ರ ದೊಡ್ಡದು" ಅಂದು ಬಿಡುತ್ತಿದ್ದರು. ಆಗೆಲ್ಲ ಹರೆಯ ಬಂದುದರ ಬಗೆಗೇನೇ ರಮೇಶನಿಗೆ ಅಸಹ್ಯ ಬಂದು ಬಿಡುತ್ತಿತ್ತು. ನಾಟಕಗಳಲ್ಲಿ ರಮೇಶನಿಗಾಗ ವಿಪರೀತ ಆಸಕ್ತಿ ಇದ್ದರೂ ಎಂದೂ ಶಾಲಾನಾಟಕಗಳಲ್ಲಿ ಭಾಗವಹಿಸುತ್ತಿದ್ದಿಲ್ಲ. ಯಾಕೆಂದರೆ, ಯಾವಾಗಲೂ ಅವನಿಗೆ ಸಿಗುತ್ತಿದ್ದುದು ಭಿಕ್ಷುಕ, ಅಡುಗೆಯಾಳು, ಕೂಲಿಕಾರ ಇಂಥಾ ಪಾತ್ರಗಳೇ. ಒಂದಿನ ಶಾಲೆಯ ವಾರ್ಷಿಕೋತ್ಸವಕ್ಕೆಂದು ಹುಡುಗರಿಗೆ ಕೃಷ್ಣದೇವರಾಯ ನಾಟಕದ ತಾಲೀಮು ಮಾಡಿಸುತ್ತಿದ್ದ ಪತ್ತಾರ ಸರ್ ಎದುರು ನಿಂತು, "ಸರ್, ನಾ ವಿದೂಷಕನ ಪಾತ್ರ ಒಲ್ಲೆ. ದೇವರಾಯನ ರೋಲ್ ಬೇಕಾದರೆ ಮಾಡ್ತೇನಿ" ಅಂದುಬಿಟ್ಟ. ಅಲ್ಲೇ ನಿಂತಿದ್ದ ಅವನ ಸಹಪಾಠಿಗಳು ಪಿಸ ಪಿಸ ನಕ್ಕಿದ್ದೂ, "ರಾಜಾ ಅಂತ ರಾಜಾ! ರಾಜಾನ ಬೆನ್ನು ಹಿಂಗ ಬಾಗಿರ್ತದೇನು? ರಾಜಾ ಉಗುರು ಕಚ್ಚಿಕೋತ ನಿಲ್ಲಂಗಿಲ್ಲ" ಅಂತ ಪಿಸುಗುಟ್ಟಿದ್ದೂ ಕೇಳಿ ಥಂಡಾ ಹೊಡೆದು ಹೋಗಿದ್ದ. ಬೆನ್ನಂತೆ ಕಾಯಂ ಆಗಿ ಆತ್ಮವಿಶ್ವಾಸವೂ ಗೂನಾಗಿಬಿಟ್ಟಿತ್ತು.

ಬಿಂದಿಗೆ ಕಟ್ಟಿ ಒಗೆದ ಹಗ್ಗದಂತೆ ನೆನಪಿನ ಬಾವಿಗುಂಟ ಇಳಿವ ಯಾವ್ಯಾವುದೋ ಘಟನೆಗಳು, ಏನೇನೊ ಸಂವಾದಗಳು!

"ಪಿಯುಸಿನಾಗ ಛಲೋ ಮಾರ್ಕು ತಗೋಳಿಕ್ಕೆ ನಾ ಬ್ಯಾಡ ಅಂದಿದ್ನೇನು ನಿನಗ?"

"ಅಪ್ಪಾ ಯಾಕೋ ಕಲಿತದ್ದೇನೂ ನೆನಪಿಗೇ ಬರಲಿಲ್ಲ ಪರೀಕ್ಷಾ ಬರಿಯೋ ಮುಂದ. ಪ್ಲೀಸ್, ಇದೊಂದು ಸಲಾ ಮಾಫ್ ಮಾಡು. ನೀ ಡೊನೇಶನ್ ಸೀಟು ಕೊಡಿಸಿಕೊಟ್ಟೆಯಂದರೆ ಬಿ.ಇ. ಒಂದನೇ ಸೆಮಿಸ್ಟರಿನಾಗ ನಾ ಅವ್ವಲ್ ನಂಬರ ಹಚ್ಚಿ ತೋರಿಸ್ತೇನಿ."

"ನನ್ನ ಕಡೆ ರೊಕ್ಕಿಲ್ಲ ಅಂತಲ್ಲ. ಆದರೆ, ನಮ್ಮ ಮನೆತನದಾಗ ಯಾರೂ ಡೊನೇಶನ್ ಸೀಟಿನಾಗ ಓದಿಲ್ಲ. ಖಾದಿ ಭಾಂಡಾರದಾಗ ಲೆಕ್ಕಾ ಬರೆದು ಹೊಟ್ಟೆ ಹೊರಕೊಂಡ ಪ್ರಾಮಾಣಿಕ ಮನುಷ್ಯಾ ನಾ. ನಮ್ಮಪ್ಪ ಬ್ರಿಟಿಶರ ಕಾಲೇಜಿನಾಗ ತಗೊಂಡ ಡಿಗ್ರಿ ಬ್ಯಾಡ ಅಂತ್ಹೇಳಿ ತನ್ನ ಲಾ ಸರ್ಟಿಫಿಕೇಟು ಹರಿದೊಗೆದು ರೈತನಾಗಿ ಕಷ್ಟಪಟ್ಟವ. ಅವಾ ಹಂಗ ಕಷ್ಟಪಟ್ಟು ನಾಲ್ಕು ಹೊಲಾ ಮನಿ ಮಾಡಿದ ಅಂತ ನಮ್ಮ ಜೀವನ ಒಂದು ನೆಲೆ ಕಂಡಿತು. ಅಂಥಾ ಪವಿತ್ರ ರೊಕ್ಕದಾಗ ನಾ ನನ್ನ ಮಗನಿಗೆ ಡೊನೇಶನ್ ಸೀಟು ಕೊಡಿಸಿದರೆ ಮಂದಿ ಏನಂದಾರು?"

"ಮಂದೀ ಸಲುವಾಗಿ ಮಗನ ಓದಿಗೆ ರೊಕ್ಕಾ ಕೊಡದವರ ಆದರ್ಶಕ್ಕೆ ಬೆಂಕಿ ಹಚ್ಚಲಿ" ಅಂದವನೇ ಥಟ್ಟನೆ ಓಡಿಹೋಗಿದ್ದ ರಮೇಶ. ರಾಮರಾಯರ ಕೋಪ ನೆತ್ತಿಗೇರಿ ಕೈಯಲ್ಲಿದ್ದ ಶೇವಿಂಗ ಬ್ಲೇಡು ಬೀಸಿ ಒಗೆದರೆ ಅವನ ಕತ್ತಿಗೇ ಬಡೆದು ರಕ್ತ ಸೋರಿತ್ತು. ಕಾಲರ್ ತೊಯ್ಯಿಸುತ್ತಿದ್ದ ರಕ್ತದ ಪರಿವೆಯೂ ಇಲ್ಲದಂತೆ ಹುಚ್ಚನಂತೆ ಹೊರನಡೆದಿದ್ದ ರಮೇಶ. ಒಂದೊಂದೇ ನೆನಪು ಬಿಚ್ಚಿದಂತೆ ರಮೇಶನಿಗೆ ತಳಮಳ ಹೆಚ್ಚಾಗಿ ಮೆಟ್ಟಿಲಿಳಿದು ಕೆಳಗೆ ಹೋಗಿ ಆಚೆ ರಸ್ತೆಯ ಬೀಡಿ ಅಂಗಡಿಯಲ್ಲಿ ಸಿಗರೇಟು ತಗೊಂಡು ಭಸಭಸ ಹೊಗೆ ಬಿಟ್ಟ.

ಒಳಬಂದಾಗ ಇವನ ಕಿವಿಯ ಬಿಸಿಯಿನ್ನೂ ಆರಿರಲಿಲ್ಲ, ರಾಮರಾಯರು ಮಾತ್ರ ಏನೂ ಆಗೇ